ಮೂಲ ದಾವಾ ಸಂಖ್ಯೆ. 21/2022 ಪಿ ಡಬ್ಲ್ಯೂ 2

(ದಿನಾಂಕ 05-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಸಿ ಬಿ ಪಿ ವಕೀಲರಿಂದಃ-

1ನೇ ವಾದಿ ನನಗೆ ಸಂಬಂಧಿಕರಲ್ಲ ಅವಳಿಗೆ ಚಿಲುಗೋಡು ಗ್ರಾಮಕ್ಕೆ ವಿವಾಹ ಮಾಡಿಕೊಟ್ಟಿರುತ್ತಾರೆ. ಚಿಲುಗೋಡು ಗ್ರಾಮದಲ್ಲಿ ಅವರ ಕುಟುಂಬಕ್ಕೆ ಎಷ್ಟು ಜಮೀನು ಇವೆ ಎಂದು ನನಗೆ ಗೊತ್ತಿಲ್ಲ ಆದರೆ ಅದರಲ್ಲಿ ಒಂದು ಜಮೀನು ಇದೆ ಎಂದು ಹೇಳುತ್ತಿದ್ದರು. ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ನಾನೇ ವಕೀಲರಿಗೆ ಹೇಳಿ ಬರೆಸಿದ್ದೇನೆ. ದಾವಾಸ್ತಿ ಮೂಲತಃ ಯಾರದು ಅದು ಯಾರಿಂದ ಯಾರಿಗೆ ಬಂತು ಎನ್ನುವುದರ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ವಾದಿಯರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಗೆ ವಿಭಾಗದಲ್ಲಿ ಸೈಟು ಬಂದಿದ್ದು ಅದನ್ನು ಅವಳು ಮಾರಾಟ ಮಾಡಿಕೊಂಡಿರುತ್ತಾಳೆಂದರೆ ಸುಳ್ಳು. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹಾ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರು ವಿಭಾಗದಲ್ಲಿ ತಮಗೆ ಬಂದಂತಹ ಆಸ್ತಿಯನ್ನು ಮಾರಾಟ ಮಾಡಿ ಬ್ಯಾಸ್ಗಿದೇರಿ ಗ್ರಾಮದಲ್ಲಿ 3 ಜಮೀನುಗಳನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ